ಸಿ.ಸಿ .ನಂ.225/2022 ಪಿಡಬ್ಲೂಃ 1

ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎನ್ ವಕೀಲರಿಂದಃ**

6. ಸಾಲ ಮಂಜೂರು ಮಾಡುವಾಗ ಆಡಳಿತ ಮಂಡಳಿಯ ಸಭೆಯಲ್ಲಿ ಶಾಖಾ ವ್ಯವಸ್ಥಾಪಕರು ಹಾಜರಿರಬೇಕು ಎಂದರೆ ಸರಿ . ಸಾಲಗಾರರು ಹಾಜರಿರಬೇಕಾಗಿಲ್ಲ. ಮಂಡಳಿ ಸಭೆ ಸಮಯದಲ್ಲಿ ಯಾರು ಶಾಖಾ ವ್ಯವಸ್ಥಾಪಕರಾಗಿದ್ದರು ನೆನಪಿಲ್ಲ. ಆಗ ಯಾರು ಶಾಖಾ ವ್ಯವಸ್ಥಾಪಕರಾಗಿದ್ದರು ಹಿಂದಿನ ಮ್ಯಾನೇಜರ ಬಳಿ ಕೇಳಿ ತಿಳಿದುಕೊಂಡಿದ್ದೇನೆ . ಅವರು ಯಾರ ಹೆಸರು ಹೇಳಿದ್ದರು ನೆನಪಿಲ್ಲ . ವ್ಯಾಪಾರ ಉದ್ದೇಶಕ್ಕೆ ಸಾಲದ ಅರ್ಜಿಯನ್ನು ಸಲ್ಲಿಸಿದ್ದರು. ಯಾವ ವ್ಯಾಪಾರ ಮಾಡುತ್ತಿದ್ದರು ಸಾಲದ ಅರ್ಜಿಯಲ್ಲಿ ವಿವರವಾಗಿ ಬರೆಯಬೇಕು ಎಂದರೆ ಸರಿಯಲ್ಲ. ಈ ರೀತಿಯ ಕಾಲಂ ಸಾಲದ ಅರ್ಜಿಯಲ್ಲಿ ಇರುತ್ತದೆ ಎಂದರೆ ಸರಿ . ಅದಕ್ಕೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳನ್ನು ಪಡೆಯಬೇಕೆಂಬ ಕಾಲಂ ಇರುತ್ತದೆ ಎಂದರೆ ಸರಿಯಲ್ಲ. ಸಾಲಕ್ಕೆ ಇಬ್ಬರು ಜಾಮೀನುದಾರರನ್ನು ಪಡೆಯುತ್ತೇವೆ. 12 ಕಂತುಗಳ ಸಾಲವನ್ನು ಕೊಟ್ಟಿದ್ದೆವು . ಯಾವುದಾದರೂ ಕಂತು ಭರಣ ಮಾಡಿದ್ದು ಇತ್ತಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ಕಂತಿನ ಹಣ ಕಟ್ಟಿದ ಬಗ್ಗೆ ನಮ್ಮ ಶಾಖೆಯಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ . ಕಂತು ಕಟ್ಟಿದ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ . ಆ ರೀತಿ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ . ಸಾಲದ ಹಣವನ್ನು ಅವರ ಉಳಿತಾಯ ಖಾತೆಗೆ ಜಮಾ ಮಾಡಿದ್ದೇವೆ . ಉಳಿತಾಯ ಖಾತೆಗೆ ಹಣ ಜಮಾ ಮಾಡಿದ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಉಳಿತಾಯ ಖಾತೆಗೆ ಹಣ ಜಮೆ ಮಾಡಿದ್ದರೆ ಆ ಬಗ್ಗೆ ದಾಖಲಾತಿ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ . ಸಾಲವನ್ನು ಕೊಡುವಾಗ ಆರೋಪಿಯಿಂದ ಆರ್ ಟಿಸಿ , ಜಮೀನಿನ ದಾಖಲಾತಿಗಳನ್ನು ಪಡೆದಿಲ್ಲ . ದಿಃ 14-12-2020 ರಂದು ಆಡಳಿತ ಮಂಡಳಿಯ ಸಭೆ ನಡೆದಿರುತ್ತದೆ. ಜಾಮೀನುದಾರರ ಭದ್ರತೆಯನ್ನು ಯಾವ ದಿನದಂದು ಪಡೆದಿದ್ದೇವೆ

ಪಿಡಬ್ಲ್ಯೂ: 1

ನೆನಪಿಲ್ಲ. ಜಾಮೀನುದಾರರಿಂದ ಯಾವ ದಾಖಲಾತಿಗಳನ್ನು ಪಡೆದಿದ್ದೇವೆ ನೆನಪಿಲ್ಲ . ಜಾಮೀನುದಾರರಿಂದ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ, ಅವು ನಮ್ಮ ಬ್ಯಾಂಕಿನಲ್ಲಿ ಇರುತ್ತವೆ ಎಂದರೆ ಸರಿ . ಲೋನ್ ಸೆಂಕ್ಷನ್ ಆದ ನಂತರ ಜಾಮೀನನ್ನು ಪಡೆದಿದ್ದೇವೆ . ಸಾಲಗಾರರ ಖಾತೆ ನಂಬರ ಕೂಡ ಸಾಲದ ಅರ್ಜಿಯಲ್ಲಿ ನಮೂದಿಸಿದ್ದೇವೆ. ಸಾಲದ ಖಾತೆ ನಂಬರ ನೆನಪಿಲ್ಲ. ಸಾಕ್ಷಿದಾರರ ಭದ್ರತೆ ಪಡೆದುಕೊಂಡಲ್ಲಿ ಸಾಕ್ಷಿದಾರರ ಕಾಲಂ ಇರುತ್ತದೆ ಎಂದರೆ ಸರಿ. ಅದರಲ್ಲಿ ಸಾಕ್ಷಿದಾರರ ಸಹಿ ಪಡೆದಿಲ್ಲ . ಪಡೆದುಕೊಳ್ಳಲೇ ಬೇಕೆಂಬ ಅವಶ್ಯಕತೆ ಇಲ್ಲ . ಜಾಮೀನುದಾರರ ಸಹಿಯನ್ನು ಪಡೆದುಕೊಳ್ಳುತ್ತೇವೆ. ಸಾಲದ ಭದ್ರತೆ ಕಾಲಂನಲ್ಲಿ ಜಾಮೀನುದಾರರ ಸಹಿ ತೆಗೆದುಕೊಂಡಿದ್ದೇವೆ . ಎಲ್ಲಾ ಜಾಮೀನುದಾರರ ಸಹಿಗಳನ್ನು ಪಡೆದಿದ್ದೇವೆ . ಭದ್ರತೆ ಕಾಲಂನಲ್ಲಿ ಸಾಕ್ಷಿದಾರರ ಸಹಿಯನ್ನು ಪಡೆಯದಿದ್ದರೆ ದಾಖಲಾತಿ ಅಪೂರ್ಣವಾಗುತ್ತದೆ ಹಾಗೂ ಸಾಲದ ಮಂಜೂರಾತಿ ಪೂರ್ತಿ ಆಗುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.